ವರದಿಯನ್ನೊಪ್ಪಿಸಂವ್ವದು

ಶ್ರೀ ತಿಪ್ಪೇಸ್ವಾಮಿ (ಅಧ್ಯಕ್ಷರು) ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿ) ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯಂ ಆರನೇ ವರದಿಯನ್ನೊಪ್ಪಿಸಂವ್ವದು.

ಅಧ್ಯಕ್ಷರು.— ವರದಿಯನ್ನು ಒಪ್ಪಿಸಲಾಯಿತು.

ಗಮನ ಸೆಳೆಯಂವ ಸೂಚನೆ

1) ತುಂಗಭದ್ರಾ ಜಲಾಶಯದ ಎಡದಂಡೆಯ ಮುಖ್ಯ ಕಾಲುವೆ ಒಡೆದಂ ಹೋಗಿ ಭಾರಿ ಪ್ರಮಾಣದ ಬೆಳೆ ನಾಶವಾಗಿರುವ್ವುದು.

† ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ, ತುಂಗಾಭದ್ರ ಜಲಾಶಯದ ಎಡದಂಡೆಯ ಮುಖ್ಯ ಕಾಲುವೆ ಒಡೆದಂ ಹೋಗಿ ಭಾರಿ ಪ್ರಮಾಣದಲ್ಲಿ ಬೆಳೆ ನಾಶವಾಗಿರುವ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಸಚಿವರು)

ತುಂಗಭದ್ರಾ ಎಡದಂಡೆ ನಾಲೆಯು ೧೫ನೇ ಮೈಲಿಯ ಸರಪಳಿ ೭೭.೦೫ರಲ್ಲಿ ನಿರ್ಮಾಣವಾಗಿರುವ ಅಂಡರ್ ಟನಲ್ ಸಮೀಪ ದಿನಾಂಕ ೨೯-೧೦-೧೯೭೮ರ ಪ್ರಾತಃಕಾಲ ೦:೩೦ ಗಂಟೆಯಂ ವೇಳೆಗೆ ನಾಲೆಯು ಒಡೆಯಲಾಗಿದ್ದು ಈ ಕಾರಣದಿಂದ ಅಂಡರ್ ಟನಲ್ ಮೇಲ್ ಭಾಗದ ನಾಲೆಯು ಎರಡೂ ಭಾಗದ ಒಡ್ಡುಗಳು ಮತ್ತು ಕೆಳಭಾಗದ ನಾಲೆಯು ಎರಡೂ ಭಾಗದ ಒಡ್ಡುಗಳು ಕುಸಿದು ನೀರಿನಲ್ಲಿ ಕೊಚ್ಚಿ ಹೋಗಿರುವ್ವುದು. ತುಂಗಭದ್ರಾ ಎಡದಂಡೆ ನಾಲೆಯಲ್ಲಿ ರಬಿ ಬೆಳೆಗಾಗಿ ೩,೧೦೦ ಕ್ಯೂಸೆಕ್ಸ್ ಪರಿಮಾಣದಷ್ಟು ನೀರು ಹರಿಯಬಿಡಲಾಗುತ್ತಿದ್ದು ನೀರಿನ ಪರಿಮಾಣವನ್ನು ಹಂತ ಹಂತವಾಗಿ ಗಂಟೆಯೊಂದಕ್ಕೆ ೨೦೦ ಕ್ಯೂಸೆಕ್ಸ್‌ನಂತೆ ಕಡಿಮೆ ಮಾಡುವ ಕ್ರಮ ಕೈಗೊಂಡು ನಾಲೆಯಲ್ಲಿ ನೀರು ಬಿಡುವ್ವುದನ್ನು ಬಂದು ಮಾಡಂಪ ಕ್ರಮ ನೀರಾವರಿ ಇಲಾಖೆಯ ಅಧಿಕಾರಿಗಳು ತಕ್ಷಣ ಕೈಗೊಂಡಿರುತ್ತಾರೆ. ನಾಲೆಯು ಒಡೆದುಹೋದ ಭಾಗದಲ್ಲಿ ಒಡ್ಡಿನ ಎತ್ತರ ಸುಮಾರು ೧೮ ಅಡಿಗಳಿದ್ದು, ಅಂಡರ್ ಟನಲ್ ಹತ್ತಿರ ನಾಲೆಯ ತಳಮಟ್ಟದ ಕೆಳಗೆ ಸುಮಾರು ೫ ಅಡಿ ಮಣ್ಣಿನ ಒಡ್ಡನ್ನು ಭರಿಸುವ ಅಗತ್ಯವಿದೆ.

ಇಲಾಖೆಯ ಅಧಿಕಾರಿಗಳು ತ್ವರಿತಗತಿಯಲ್ಲಿ ಒಡೆದುಹೋದ ಒಡ್ಡಿನ ದುರಸ್ತಿ ಕೆಲಸಗಳನ್ನು ಕೈಗೊಳ್ಳುವ ಸಲುವಾಗಿ ಅವಶ್ಯವಾದ ಯಂತ್ರಗಳು, ಸಾಮಗ್ರಿಗಳನ್ನು ಕಾರ್ಮಿಕ ವರ್ಗದವರನ್ನು ಸಂಜಾಯಿಷಿಸುವ ಕ್ರಮ ಕೈಗೊಳ್ಳಲಾಗಿದ್ದು, ದುರಸ್ತಿ ಕೆಲಸಗಳನ್ನು ದಿನಾಂಕ ೩೦-೧೦-೧೯೭೮ರಿಂದ ಕಾರ್ಯಗತ ಮಾಡಲು ಪ್ರಾರಂಭಿಸಲಾಗಿದೆ. ತಾ. ೨೦-೧೦-೧೯೭೮ರಂದು ತುಂಗಭದ್ರಾ ಮಂಡಳಿಯ ಸಭೆಯಲ್ಲಿ ಭಾಗವಹಿಸಲು ತೆರಳಿದ್ದ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ-೨ ಇವರು ತುಂಗಭದ್ರಾ ಡ್ಯಾಂನಲ್ಲಿದ್ದ ಕಾರಣ, ಕಾರ್ಯದರ್ಶಿಯವರಂ ಸಹ ಮುಖ್ಯ ಇಂಜಿನಿಯರ್‌ರವರೊಡನೆ ನಾಲೆಯಂ ಒಡೆದುಹೋದ ಸ್ಥಳಕ್ಕೆ ಭೇಟಿ ನೀಡಿ ದುರಸ್ತಿ ಕೆಲಸಗಳನ್ನು ಕೈಗೊಳ್ಳುವ ವಿಷಯದಲ್ಲಿ ಸೂಕ್ತ ಆದೇಶವನ್ನು ನೀಡಿರುತ್ತಾರೆ, ಅಲ್ಲದೆ, ಈ ದುರಸ್ತಿ ಕೆಲಸಗಳನ್ನು ಪೂರ್ಣಗೊಳಿಸಂವ ಸಲಂವಾಗಿ ತಾತ್ಕಾಲಿಕ ಕಾರ್ಯಕ್ರಮವನ್ನು ಸೂಚಿಸಿ ಕೆಲಸವನ್ನು ೮-೧೦ ದಿನಗಳೊಳಗೆ ಪೂರ್ಣಗೊಳಿಸಬೇಕೆಂದು ಸಲಹೆ ಮಾಡಿರುತ್ತಾರೆ.

ದಿನಾಂಕ ೨೨-೨-೧೯೭೮ರಂದು ನಾನೂ ಕೂಡ ನಾಲೆಯಂ ಒಡೆದಂಹೋಗದ ನಿವೇಶನಕ್ಕೆ ಭೇಟಿ ನೀಡಲಾಗಿದ್ದು ದುರಸ್ತಿ ಕಾರ್ಯಗಳ ಚಟುವಟಿಕೆ ಬಗ್ಗೆ ವೀಕ್ಷಿಸಿ ಇಲಾಖಾ ಅಧಿಕಾರಿಗಳಿಗೆ ದಿನರಾತ್ರಿ ೨೪ ಗಂಟೆ ಕಾಲಾ ಸತತವಾಗಿ ದುರಸ್ತಿ ಕೆಲಸಗಳನ್ನು ಪ್ರಗತಿಯಲ್ಲಿಟ್ಟು ತ್ವರಿತಗತಿಯಲ್ಲಿ ಕಾರ್ಯವನ್ನು ಪೂರ್ಣಗೊಳಿಸಬೇಕೆಂದು ಆದೇಶ ನೀಡಿರುತ್ತೇನೆ. ನಾಲೆಯು ಒಡೆದುಹೋದ ಒಡ್ಡನ್ನು ಪುನಃ ಸಂಸ್ಥಿತಿಗೆ ತರಲು ಅವಶ್ಯವಾದ ಮಣ್ಣಿನ ಕೆಲಸದ ಪರಿಮಾಣವನ್ನು ಪರಿಗಣನೆಗೆ ತೆಗೆದಂಕೊಂಡಲ್ಲಿ ಪ್ರಾಯಶಃ ಈ ದುರಸ್ತಿ ಕೆಲಸವು ೮-೧೦ ದಿನಗಳಲ್ಲಿ ಪೂರ್ಣಗೊಳಿಸುವ ಸಾಧ್ಯತೆಯಿದೆ. ದುರಸ್ತಿ ಕೆಲಸಗಳು ಒಂದು ಹಂತಕ್ಕೆ ತಲಂಪಿದ ನಂತರ ನಾಲೆಯಲ್ಲಿ ಭಾಗಶಃ ನೀರನ್ನು ಬಿಡುವ ಸಾಧ್ಯತೆಯಿದ್ದಲ್ಲಿ ಕ್ರಮ ಕೈಗೊಳ್ಳುವಂತೆ ಆದೇಶ ನೀಡಲಾಗಿದೆ.

ನಾಲೆಯು ಒಡೆದುಹೋದ ಕಾರಣ, ಸಮೀಪದಲ್ಲಿರುವ ಅಚ್ಚುಕಟ್ಟು ಪ್ರದೇಶದ ಭೂಮಿಯಲ್ಲಿ ಮಣ್ಣು, ತುಂಬಿದಲ್ಲಿ ಅಂತಹ ಪ್ರದೇಶಗಳನ್ನು ಪರಿಶೀಲಿಸಿ ವ್ಯವಸಾಯಕ್ಕೆ ಪುನಃ ಅನುಕೂಲವಾಗುವಂತೆ ಮಾಡುವ ಕ್ರಮಗಳನ್ನು ತಾತ್ಕಾಲಿಕವಾಗಿ ಕಾರ್ಯಗತ ಮಾಡಲಾಗುವುದು. ಅಚ್ಚುಕಟ್ಟು ಪ್ರದೇಶದ ಇತರ ಭಾಗಗಳಲ್ಲಿ ಕೇವಲ ೧೦-೧೨ ದಿವಸಗಳ ಅವಧಿಯಲ್ಲಿ ನೀರಿನ ಸರಬರಾಜು ಇಲ್ಲದಿದ್ದ ಪಕ್ಷದಲ್ಲಿ ಬೆಳೆ ಒಣಗುವ ಸಂಭವ ಇರುವುದಿಲ್ಲವಾದ ಕಾರಣ, ಈ ಪರಿಸ್ಥಿತಿಯಲ್ಲಿ ಪರಿಹಾರ ನೀಡುವ ಅಗತ್ಯವಿರುವುದಿಲ್ಲವೆಂದೂ ತೋರುವುದು.

ಶ್ರೀ ಆರ್. ವೆಂಕಟರಾವಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಸುಮಾರು ಮುನ್ನೂರು-ನಾಲ್ಕುನೂರು ಎಕರೆ ಜಮೀನು ಕೊರಕಲು ಬಿದ್ದು ವ್ಯವಸಾಯಕ್ಕೆ ಯೋಗ್ಯವಾಗಿಲ್ಲದೇ ಕೋಗುವುದು ನಿಜವಲ್ಲವೆ ? ಸಾವಿರಾರು ಎಕರೆ ಜಮೀನಿನಲ್ಲಿ ಕಡಲೆಕಾಯಿ ಬೆಳೆ ಹಾಗೂ ಪಂಪಿತರ ಬೆಳೆಗಳಿಗೆ ಈ ನಾಲೆ ಹೊಡೆದಿರುವುದರಿಂದ ನಷ್ಟವಾಗಿರುವುದು ನಿಜವಲ್ಲವೆ ? ಮಾನ್ಯ ಮಂತ್ರಿಯವರು ಆ ಸ್ಥಳಕ್ಕೆ ವಿಸಿಟ್ ಕೊಟ್ಟಿದ್ದಾರೆ. ಆ ಕಾಲುವೆ ಲೈನಿಂಗ್ ಮಾಡಿದ್ದಾದರಲ್ಲೇ ಡಿಫೆಕ್ಟ್ ಇದ್ದುದರಿಂದ ಅದು ಒಡೆದಿದೆ ಎಂದು ತಿಳಿದು ಬಂದಿದೆ. ಈ ನಿರ್ಮಾಣ ಕಾರ್ಯದಲ್ಲಿ ಯಾವ ಇಂಜಿನಿಯರ್ ಇದ್ದರೋ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತಿರಾ ? ಈ ಕಾಲುವೆಯನ್ನು ಬೇಗ ದುರಸ್ತಿ ಮಾಡದಿದ್ದರೆ, ರಾಯಚೂರು ಜಿಲ್ಲೆಯ ನಾಲ್ಕೈದು ತಾಲ್ಲೂಕುಗಳಲ್ಲಿ ಪೂರ್ತಿ ಬೆಳೆ ನಷ್ಟವಾಗುವ ಸಂಭವ ಇದೆ. ಇದರ ಬಗ್ಗೆ ಬೇಗ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ಎಂದು ನಾನು ತಮ್ಮನ್ನು ಕೇಳುತ್ತೇನೆ, ಮಾನ್ಯ ಸದಸ್ಯರಾದ ಶ್ರೀರಂಗದೇವರಾಯಲುರವರು ಈ ಕಾಲುವೆ ಒಡೆದಿರುವ ಬಗ್ಗೆ ಕೆಲವು ಫೋಟೋಗಳನ್ನು ನನ್ನ ಹತ್ತಿರ ಕೊಟ್ಟಿದ್ದಾರೆ ಈ ಫೋಟೋಗಳನ್ನು ಸಭೆಗೆ ಕೊಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಈ ಫೋಟೋಗಳು ನನ್ನ ಹತ್ತಿರವೂ ಇವೆ. ಮಾನ್ಯ ಅಧ್ಯಕ್ಷರೇ, ಈ ನಾಲೆ ಒಡೆದಿರತಕ್ಕಂಥ ಪ್ರದೇಶ ಏನಿದೆ ಈ ಕೆಲಸವನ್ನು ನಮ್ಮ ಸರ್ಕಾರ ಮಾಡಿದ್ದಲ್ಲ, ಈ ಕೆಲಸ ಇನ್ನೂ ಆಂಧ್ರ ಸರ್ಕಾರದವರು ಮಾಡಿದ್ದರು ಆದ್ದರಿಂದ ಯಾರ ಮೇಲೆ ಶಿಕ್ಷೆ ಮಾಡಬೇಕು ಎನ್ನುವ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಇನ್ನು ಎರಡನೆಯದಾಗಿ ಏನು ಈ ಕಾಲುವೆ ಒಡೆದು ಹೋಗಿದೆ ಇದನ್ನು ಸರಿಪಡಿಸಲಿಕ್ಕೆ ಸುಮಾರು ೧೦ ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕಾಗುತ್ತದೆ. ನಾನು ಅಲ್ಲಿ ಎರಡು ಎರಡೂವರೆ ಗಂಟೆಗಳ ಕಾಲ ಇದ್ದು ಪ್ರತಿಯೊಂದನ್ನೂ ಸ್ಥೂಲವಾಗಿ ಪರಿಶೀಲಿಸಿದ್ದೇವೆ. ಇದರ ಜೊತೆಗೆ ಸುಮಾರು ೩ ಲಕ್ಷ ಎಕರೆಯಲ್ಲಿ ಬೆಳೆ ಬೆಳೆದು ನಿಂತಿದೆ. ಆದ್ದರಿಂದ ಡೆ ಅಂಡ್ ನೈಟ್ ಶಿಫ್ಟ್ ಮೇಲೆ ಕೆಲಸ ಮಾಡಬೇಕೆಂದು ಹೇಳಿದ್ದೇನೆ. ರಾತ್ರಿ ಹೊತ್ತು ಫ್ಲಡ್ ಲೈಟ್ ಹಾಕಿಕೊಂಡು ಕೆಲಸ ಮಾಡುತ್ತಿದ್ದಾರೆ. ಬೆಳೆಗೆ ಅಪಾಯವಾಗದ ರೀತಿಯಲ್ಲಿ ತ್ವರಿತವಾಗಿ ಕೆಲಸ ಮಾಡುವುದಕ್ಕೆ ಸರ್ಕಾರ ಎಲ್ಲಾ ರೀತಿಯ ಕ್ರಮ ಕೈಗೊಳ್ಳುತ್ತದೆ. ಈ ಕೆಲಸಕ್ಕೆ ಅಗತ್ಯವಾಗಿ ಬೇಕಾಗಿರುವ ಕಂಪ್ರೆಸರ್‌ಗಳು, ಲಾರಿಗಳು, ಸ್ಕ್ರಾಪರ್ ಡೋಜರ್‌ಗಳು ಜನರೇಟರುಗಳು, ಮತ್ತು ಎಲ್ಲಾ ತರಹದ ಮೆಶಿನರಿಗಳನ್ನು ಎಲ್ಲಾ ಜಿಲ್ಲೆಗಳಿಂದ ತರಿಸಿಕೊಂಡು ಕೆಲಸವನ್ನು ಅತ್ಯಂತ ವೇಗದಲ್ಲಿ ಶಿಫ್ಟ್ ಬೇಸಿಸ್ ಮೇಲೆ ಮಾಡಬೇಕೆಂದು ನಾನೆ ಆದೇಶ ಕೊಟ್ಟಿದ್ದೇನೆ. ಬಹುಶಃ ನಾವು ೧೫ನೇ ತಾರೀಖಿನ ಒಳಗೆ ಈ ಕೆಲಸವನ್ನು ಮಾಡಿಸುತ್ತೇವೆ. ರೈತರ ಬೆಳೆ ಒಣಗುವುದಕ್ಕೆ ಬಿಡುವುದಿಲ್ಲವೆಂದು ಈ ಸಂದರ್ಭದಲ್ಲಿ ತಮ್ಮ ಮುಖೇನ ರೈತರಿಗಾಗಿ ಕೂಡ ಭರವಸೆ ಕೊಡುವುದಕ್ಕೆ ಇಚ್ಛಿಪಡುತ್ತೇನೆ.

೧೨-೩೦ ಪಿ. ಎಂ.

ಇದರಲ್ಲಿ ಸರಕಾರದ ಅನಾಸಕ್ತಿಯ ಪ್ರಶ್ನೆ ಬರುವುದಿಲ್ಲ. ಸರಕಾರಕ್ಕೆ ರೈತರ ಪರವಾಗಿ ಆಸಕ್ತಿ ಇದ್ದೇ ಇದೆ. ಈ ಕೆಲಸಕಾರ್ಯಕ್ಕೆ ಬೇಕಾದಂಥ ೧೦ ಲಕ್ಷ ರೂಪಾಯಿಗಳನ್ನು ಹಣದ ತೊಂದರೆ ಇದ್ದರೂ ಕೂಡ ಹೊಂದಿಸಿಕೊಂಡು ಮಾಡಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ೧೫ನೇ ತಾರೀಖಿನ ಒಳಗಾಗಿ ಅಥವಾ ಇನ್ನೂ ಒಂದೆರಡು ದಿನಗಳ ಮುಂಚೆಯೇ ಆ ಕೆಲಸವನ್ನು ಮಾಡಿ ಮುಗಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ರೈತ ಸಂಘದ ಪ್ರತಿನಿಧಿಗಳು ಕೂಡ ಅಲ್ಲಿಗೆ ಬಂದಿದ್ದರು. ಅದಕ್ಕೂ ಹಿಂದಿನ ದಿನ ಎರಡು ಲಾರಿ ಜನರು ಹೋಗಿ ಆ ಬಗ್ಗೆ ಪ್ರಚಾರವನ್ನೆ ಸಲ್ಲಿಸಿದ್ದಾರೆ. ನಾನು ಅಲ್ಲಿಗೆ ಹೋದಾಗ ರೈತ ಸಂಘದ ಪ್ರತಿನಿಧಿಗಳು ಇದ್ದರು. ಅವರೊಂದಿಗೆ ಮಾತನಾಡಿದ್ದೇನೆ. ಅಲ್ಲಿ ೮-೧೦ ದಿನಗಳ ಹಿಂದೆ ಕಾಲುವೆಯಿಂದ ಸ್ವಲ್ಪ ಸ್ವಲ್ಪ ನೀರು ಹೋಗುತ್ತಿದ್ದಾಗ ಅದನ್ನು ನೋಡಿ ದುರಸ್ತಿಪಡಿಸುವುದಕ್ಕೆ ಸಾಧ್ಯವಿತ್ತು, ಅದನ್ನು ಅಧಿಕಾರಿಗಳು ಮಾಡಲಿಲ್ಲ ಎಂದು ದೂರು ಇದೆ. ಅದರ ಬಗ್ಗೆ ಕೂಡ ಸೂಕ್ತ ತನಿಖೆ

ಯನ್ನು ಮಾಡಿಸುತ್ತೇನೆ. ಒಂದು ವೇಳೆ ಆ ರೀತಿಯಲ್ಲಿ ನಮ್ಮ ಇಲಾಖಾ ಅಧಿಕಾರಿಗಳ ಅಲಕ್ಷತನದಿಂದ ಹೀಗೆ ಏನಾದರೂ ಅನಾಹುತ ಆಗಿದ್ದರೆ ಅದನ್ನು ಕಂಡುಹಿಡಿದು ಕಾರಣರಾದವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಆ ಪ್ರದೇಶದಲ್ಲಿರುವ ಮೂರುಲಕ್ಷ ಎಕರೆ ಬೆಳೆಯನ್ನು ಸಂರಕ್ಷಿಸುವುದಕ್ಕೆ ಹಗಲು ರಾತ್ರಿಯಾದರೂ ಕೆಲಸ ಮಾಡಿ ನಮ್ಮ ಪ್ರಯತ್ನವನ್ನು ಮಾಡುತ್ತೇವೆ. ಹೇಗಾದರೂ ಮಾಡಿ ಬೆಳೆಯನ್ನು ಉಳಿಸುವುದಕ್ಕೆ ಪ್ರಯತ್ನಿಸುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೆ, ತಮ್ಮ ಅವಗಾಹನೆಗಾಗಿ ನಾನೂ ಫೋಟೋಗಳನ್ನು ಕೊಟ್ಟಿದ್ದೇನೆ. ಅಲ್ಲಿಯ ಪ್ರದೇಶದಲ್ಲಿನ ಎರಡು ಸಾವಿರ ಎಕರೆ ಪ್ರದೇಶದಲ್ಲಿನ ಬೆಳೆಯು ಪೂರ್ತಿಗಾಗಿ ನಾಶವಾಗಿದೆ. ಜೊತೆಗೆ ಕಾಲುವೆಯ ಎರಡು ಕಡೆಗಳಲ್ಲಿ ಒಡೆದು ಹೋಗಿದೆ. ಅಲ್ಲಿ ಪಂಣ್ಣು ಕೊಚ್ಚಿ ಕೊಂಡು ಹೋಗಿ ಅಲ್ಲಿಯ ಭೂಮಿಯು ವ್ಯವಸಾಯ ಯೋಗ್ಯವಿಲ್ಲದ ಹಾಗೆ ಆಗಿದೆ. ಆ ಪ್ರದೇಶವು ಪೂರ್ಣವಾಗಿ ಹಾಳಾಗಿ ಹೋಗಿದೆ. ಇದರಿಂದಾಗಿ ಅಲ್ಲಿನ ರೈತರಿಗೆ ವಿಪರೀತವಾಗಿ ನಷ್ಟ ಉಂಟಾಗಿರುತ್ತದೆ. ಈ ನಷ್ಟವನ್ನು ಲಕ್ಷದಲ್ಲಿರಿಸಿಕೊಂಡು, ಜಮೀನಾನು, ಬೆಳೆ ಹಾಳಾದವರಿಗೆ ಪರಿಹಾರವನ್ನು ಕೊಡುವಂತಹ ಒಂದು ಅವಕಾಶವನ್ನು ಕಲ್ಪಿಸಿಕೊಡುತ್ತೀರಾ? ಹೀಗೆ ನಷ್ಟಕ್ಕೊಳಗಾದ ಪ್ರದೇಶವು ಮೂರು ಲಕ್ಷ ಎಕರೆಗಿಂತಲೂ ಜಾಸ್ತಿ ಇದೆ. ಆ ಪ್ರದೇಶದ ನಷ್ಟಕ್ಕೊಳಗಾದ ರೈತರಿಗೆ ಪರಿಹಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೆಗೌಡ.—ಮಾನ್ಯ ಸದಸ್ಯರು ನಷ್ಟಕೊಳಗಾದ ರೈತರಿಗೆ ಪರಿಹಾರವನ್ನು ಕೊಡುವ ಬಗ್ಗೆ ಕೇಳಿಕೊಂಡಿದ್ದಾರೆ. ಹಾಗೆ ಪರಿಹಾರವನ್ನು ಕೊಡುವಲ್ಲಿ ನಿರ್ದಿಷ್ಟವಾದ ಕೆಲವು ನಿಯಮಗಳು ಇವೆ. ಅವುಗಳನ್ನು ಅನುಸರಿಸಬೇಕಾಗುತ್ತದೆ. ಆದರೆ ಪರಿಸ್ಥಿತಿಯನ್ನು ತ್ವರಿತವಾಗಿ ಪರಿಗಣಿಸಿ, ಭೂಮಿಯಂ ಮೇಲೆ ಬಿದ್ದ ಮಣ್ಣನ್ನು ತೆಗೆಸುವಂತಹ ಕಾರ್ಯವನ್ನು ಮತ್ತಿತರ ಅಗತ್ಯ ಕಾರ್ಯಗಳನ್ನು ತೆಗೆದುಕೊಳ್ಳುವಲ್ಲಿ ವಿಳಂಬ ಮಾಡುವುದಿಲ್ಲ. ಆದರೆ ಪರಿಹಾರವನ್ನು ಕೊಡುವ ಬಗ್ಗೆ ಇರುವ ಅಡಚಣೆಯನ್ನು ಮಂತ್ರಿ ನಾನು ಹೇಳಬೇಕಾಗಿಲ್ಲ. ಅದಕ್ಕೆ ರೆವಿನ್ಯೂ ಇಲಾಖೆಯವರಿಂದ ಹಣವನ್ನು ಕೊಡಬೇಕಾಗುತ್ತದೆ. ಆದರೂ ನಿಯಮಗಳ ಪ್ರಕಾರ ಏನು ಮಾಡಬೇಕೆಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮಗಳನ್ನು ಆ ಬಗ್ಗೆ ತೆಗೆದುಕೊಳ್ಳುತ್ತೇನೆ. ನಮಗೆ ಈಗ ಅತಿ ಮುಖ್ಯವಾಗಿ ಆಗಬೇಕಾದಂಥ ಕಾರ್ಯ ಅಲ್ಲಿನ ಮೂರು ಲಕ್ಷ ಎಕರೆ ಪ್ರದೇಶದಲ್ಲಿನ ಪೈರನ್ನು ಉಳಿಸುವುದಾಗಿದೆ ಅದನ್ನು ಉಳಿಸುವುದಕ್ಕೆ ಏನೇನು ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇವೆ. ಆ ಬಗ್ಗೆ ಅನಾಸಕ್ತಿಯನ್ನು ವಹಿಸಿಲ್ಲ ಎಂದು ಹೇಳಬಯಸುತ್ತೇನೆ.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಓದಿ.

೨ ಶಿವಮೊಗ್ಗ ನಗರದ ಮೈಸೂರು ಮ್ಯಾಚ್ ಕಂಪನಿ(ಲಿಮಿಟೆಡ್)ನ ಮೂವತ್ತೇಳು ಜನ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಿರುವುದು

ಶ್ರೀ ಬಿ.ಎಸ್. ಯಡಿಯೂರಪ್ಪ.—ಶಿವಮೊಗ್ಗ ನಗರದ ಮೈಸೂರು ಮ್ಯಾಚ್ ಕಂಪನಿಯು (ಲಿಮಿಟೆಡ್‌ನ)ಸಿಬ್ಬಂದಿ ಜನ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿರುವುದರಿಂದ ಉದ್ಭವಿಸಿರುವ ಗಂಭೀರ ಪರಿಸ್ಥಿತಿಯ ಬಗ್ಗೆ ಕಾರ್ಮಿಕ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಕೆ. ಕಾಂತ (ಕಾರ್ಮಿಕ ಸಚಿವರು) —ಶಿವಮೊಗ್ಗ ವಿದ್ಯಾನಗರದಲ್ಲಿರುವ ಮೈಸೂರು ಮ್ಯಾಚ್ ಕಂಪನಿ ಇವರು ದಿನಾಂಕ ೧೩-೧೦-೧೯೮೮ ರಿಂದ ೩೭ ಜನ ಕೆಲಸಗಾರರನ್ನು ಕೆಲಸದಿಂದ ಕಚ್ಚಾ ವಸ್ತುವಿನ ಅಭಾವ ಹಾಗೂ ಆರ್ಥಿಕ ಮುಗ್ಗಟ್ಟು ಮತ್ತಿತರ ವ್ಯವಸ್ಥೆಗಳ ನವೀಕರಣ ಮಾಡುವ ಕಾರಣಗಳಿಂದಾಗಿ ರೆಟ್ರೆಂಚ್ ಮಾಡಿದ್ದಾರೆಂದು ಗೊತ್ತಾಗಿದೆ. ಈ ಬಗ್ಗೆ ಕೈಗಾರಿಕಾ ವಿವಾದವನ್ನು ಎತ್ತುವ ಮೂಲಕ ಪ್ರಶ್ನಿಸಿ ನ್ಯಾಯ ಪಡಯಬೇಕೆಂದು ಮೈಸೂರು ಮ್ಯಾಚ್ ಕಂಪೆನಿ ನಿಯಂತ್ರಿತ ಕಾರ್ಮಿಕ ಸಂಘದವರು ನಿರ್ಧಾರ ತೆಗೆದುಕೊಂಡಿದ್ದಾರೆ. ಮತ್ತು ಆಡಳಿತ ವರ್ಗದವರ ಕ್ರಮವನ್ನು ಪ್ರತಿಭಟಿಸುವ ಕ್ರಮವಾಗಿ ದಿನಾಂಕ ೧೮-೧೧-೧೯೮೮ರ ಸೋಮವಾರದಿಂದ ಶಿವಮೊಗ್ಗ ಜಿಲ್ಲಾ ಪರಿಷತ್ತಿನ ಕಛೇರಿಯ ಮುಂದೆ ಸೇರಿ ಸತ್ಯಾಗ್ರಹವನ್ನು ಆಚರಿಸಲು ತೀರ್ಮಾನಿಸಿದ್ದಾರೆಂದು ಗೊತ್ತಾಗಿದೆ. ಈ ಬಗ್ಗೆ ಶಿವಮೊಗ್ಗ ಕಾರ್ಮಿಕ ಅಧಿಕಾರಿಗಳು ಪುಥ್ಮಪ್ರವೇಶಿಸಿ ಸಂಧಾನ ಪ್ರಯತ್ನಗಳನ್ನು ನಡೆಸಿದ್ದಾರೆ. ಉಭಯ ಪಕ್ಷಗಳ ಸಂಧಾನ ಒಪ್ಪಂದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದು ಈ ದಿಸೆಯಲ್ಲಿ ಬೆಳವಣಿಗೆಯನ್ನು ನಾವು ಕಾಯಬಹುದಾಗಿದೆ.